**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 249 |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್.ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 02-02-2021 |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಲ್ಯಾಂಪ್ಸ್ ಸಂಸ್ಥೆಯನ್ನು ಮುಚ್ಚಲಾಗಿದೆಯೇ; | ಹೌದು |
| ಆ) | ಹಾಗಿದ್ದಲ್ಲಿ, ಸಂಸ್ಥೆಯಲ್ಲಿ ಉಳಿದಿರುವ ಸಿಬ್ಬಂದಿ ಎಷ್ಟು; ಯಾವ ಯಾವ ಸಂಸ್ಥೆಗಳಿಗೆ ನಿಯೋಜನೆ ಮಾಡಲಾಗಿದೆ; ಅಥವಾ ವರ್ಗಾಯಿಸಲಾಗಿದೆ; (ವಿವರ ನೀಡುವುದು) | ಮೈಸೂರು ಲ್ಯಾಂಪ್ಸ್ ಕಾರ್ಖಾನೆಯನ್ನು ಮುಚ್ಚಿದ ನಂತರ 88 ನೌಕರರು ಉಳಿದಿರುತ್ತಾರೆ. ಈ ಪೈಕಿ 4 ನೌಕರರು ಮೃತರಾಗಿದ್ದು 5 ನೌಕರರು ವಯೋ ನಿವೃತ್ತಿ ಹೊಂದಿರುತ್ತಾರೆ.<br><br>ಉಳಿದ 79 ನೌಕರರನ್ನು ಕರ್ನಾಟಕ ರಾಜ್ಯ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯಲ್ಲಿ ವಿಲೀನಗೊಳಿಸಲಾಗಿದೆ. ಈ ಪೈಕಿ 63 ನೌಕರರು ಕಾರ್ಯವರದಿ ಮಾಡಿಕೊಂಡಿದ್ದು 16 ನೌಕರರು ಕಾರ್ಯವರದಿ ಮಾಡಿಕೊಂಡಿರುವುದಿಲ್ಲ.<br><br>ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ 19 ಮೈಸೂರು ಲ್ಯಾಂಪ್ಸ್ ವರ್ಕ್ಸ್ ನೌಕರರಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: DPAR/66/DiSeNi2019, ದಿನಾಂಕ 13.05.2020ರಲ್ಲಿ ಅವರು ಕಾರ್ಯನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದ ಇಲಾಖೆಗಳಲ್ಲಿ ಅರ್ಹತೆಯ ಆಧಾರದ ಮೇಲೆ ವಿಲೀನಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| ಇ) | ಮೈಸೂರು ಲ್ಯಾಂಪ್ಸ್ ಸಂಸ್ಥೆಯಲ್ಲಿ ನೌಕರರು ತಮ್ಮ ಡಿ.ಎ. ಹಾಗೂ ಇನ್ನಿತರ ಸೌಲಭ್ಯಗಳನ್ನು ಪಡೆಯದೇ ಸಂಸ್ಥೆ ಉಳಿವಿಗಾಗಿ ನೀಡಿದ್ದು, ಇವರಿಗೆ ಸರ್ಕಾರದಿಂದ ನೆರವು ನೀಡಲಾಗುವುದೇ; | ಈ ವಿಷಯದ ಬಗ್ಗೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾವೆಗಳು ಬಾಕಿ ಇದ್ದು ಇತ್ಯರ್ಥವಾಗಬೇಕಾಗಿರುತ್ತದೆ. |
| ಈ) | ಮೈಸೂರು ಲ್ಯಾಂಪ್ಸ್ ಸಂಸ್ಥೆಯ ಒಟ್ಟು ಆಸ್ತಿ ಮೌಲ್ಯ ಎಷ್ಟು; ಈ ಆಸ್ತಿಯನ್ನು ಯಾವ ಸಂಸ್ಥೆಗೆ ಪರಭಾರೆ ಮಾಡಲಾಗಿದೆ; ನೌಕರರು ಹಾಗೂ ಷೇರುದಾರರಿಗೆ ನೀಡಬೇಕಾಗಿರುವ ಹಣದ ಮೊತ್ತ ಎಷ್ಟು? (ವಿವರ ನೀಡುವುದು) | ಮೈಸೂರು ಲ್ಯಾಂಪ್ಸ್ ಸಂಸ್ಥೆಯ ಒಟ್ಟು ಮೌಲ್ಯ ದಿನಾಂಕ 31.3.2020ರಂತೆ ರೂ.11.14 ಕೋಟಿ ಆಗಿರುತ್ತದೆ. ಭೂಸ್ವತ್ತಿನ ಮೌಲ್ಯವನ್ನು 1992ರ ನಂತರ ಪುನರ್ ಮೌಲ್ಯ ಮಾಡಿರುವುದಿಲ್ಲ.<br>ಸಂಸ್ಥೆಯ ಆಸ್ತಿಯನ್ನು ಕರ್ನಾಟಕ ಸರ್ಕಾರಕ್ಕೆ ಮಾತ್ರ ಅಡಮಾನ ಮಾಡಲಾಗಿದೆ.<br>ಷೇರುದಾರರಿಗೆ ಹಾಗೂ ನೌಕರರಿಗೆ ನೀಡಬೇಕಾದ ಹಣದ ಮೌಲ್ಯದ ಬಗ್ಗೆ ನಿರ್ಣಯವಾಗಿರುವುದಿಲ್ಲ. |

ಸಿಐ 05 ಸಿಇಎಲ್ 2021 (ಇ)

(ಜಗದೀಶ ಶೆಟ್ಟರ),
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು